ಸಿ.ಸಿ .ನಂ. 104/2023 ಪಿಡಬ್ಲೂಃ 1

ದಿನಾಂಕಃ 24-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎಸ್ ಜೆ ಎನ್ ವಕೀಲರಿಂದಃ**

5. ಸತೀಶ ದಾಮೋದರ ನಾಯ್ಕರವರು ಇದೇ ಸಂಘದಲ್ಲಿ ಸಾಲ ಪಡೆದಿದ್ದಾರೆ . ಅದು ಇದೇ ಪ್ರಕರಣದಲ್ಲಿರುವ ಸಾಲ. ಈ ಮೊದಲು ಸತೀಶ ದಾಮೋದರ ನಾಯ್ಕರವರ ವಿರುದ್ಧ ಚೆಕ್ ಕೇಸನ್ನು ದಾಖಲಿಸಿದ್ದೆವು ಎಂದರೆ ಮಾಹಿತಿ ಇಲ್ಲ . ನಮ್ಮ ಬ್ಯಾಂಕಿನಿಂದಲೇ ಪ್ರಕರಣ ದಾಖಲಿಸಲಾಗಿತ್ತು ಎಂದರೆ ಮಾಹಿತಿ ಇಲ್ಲ. ಟೊಟಲ್ ಅಮೌಂಟ್ ಸೆಟ್ಲ ಆಗಿದೆ ಎಂದು ರಾಜಿ ಮಾಡಿಕೊಂಡಿದ್ದೇವೆ ಎಂದರೆ ಮಾಹಿತಿ ಇಲ್ಲ. ಈ ಪ್ರಕರಣದ ಸಾಲವನ್ನು 2019 ರಲ್ಲಿ ಪಡೆದಿರುತ್ತಾರೆ . ಸತೀಶ ದಾಮೋದರ ನಾಯ್ಕ ಆಂತರಿಕವಾಗಿ 50 ಸಾವಿರ ರೂಪಾಯಿ ಸಾಲ ಪಡೆದುಕೊಂಡಿದ್ದಾರೆ . ಸಿಸಿ ನಂ. 793/2018 ನ್ನು ಸತೀಶ ದಾಮೋದರ ನಾಯ್ಕರವರ ಮೇಲೆ ದಾಖಲಿಸಿದ್ದೆವು ಎಂದರೆ ಸಾಕ್ಷಿ ಆ ಸಂದರ್ಭದಲ್ಲಿ ನಾನು ಇರಲಿಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ . 2018 ರಲ್ಲಿ ಹಾಕಿರುವ ಕೇಸಿನ ಪ್ರಕಾರ ಒಂದು ಸಾಲ ಕಟಬಾಕಿ ಇದ್ದಾಗ ಮತ್ತೇ ಪುನಃ ಅವರಿಗೆ ಸಾಲ ಕೊಡಲು ಬರುವುದಿಲ್ಲ ಎಂದರೆ ಸಾಕ್ಷಿ ಅವರು ಕೇಸು ವಾಪಸ್ಸು ತೆಗೆದುಕೊಳ್ಳಿ , ಹೊಸ ಸಾಲ ಮಾಡಿಕೊಡಿ ಎಂದು ಮನವಿ ಮಾಡಿಕೊಂಡರೆ ಕೇಸನ್ನು ವಾಪಸ್ಸು ತೆಗೆದುಕೊಂಡು ಹೊಸ ಸಾಲ ಮಾಡಿಕೊಡಲಾಗುತ್ತದೆ . ನಂತರ ಈ ಪ್ರಕರಣದಲ್ಲಿರುವ ಸಾಲವನ್ನು ನೀಡಲಾಗಿದೆ. ಸಿಸಿ 793/2018 ನ್ನು ದಿಃ 08-02-2020 ರಂದು ಲೋಕ ಅದಾಲತ್ ನಲ್ಲಿ ರಾಜೀ ಮಾಡಿಕೊಂಡಿದ್ದೇವೆ ಎಂದರೆ ಮಾಹಿತಿ ಇಲ್ಲ. ಈ ಸಾಲವನ್ನು ಕೊಡುವ ಸಮಯದಲ್ಲಿ ಸತೀಶ ದಾಮೋದರ ನಾಯ್ಕ ಅವರ ಸಾಲ ಇತ್ತು , ಆದರೂ ಕೂಡ ಪುನಃ ಸಾಲ ಕೊಟ್ಟಿದ್ದೇವೆ ಎಂದರೆ ಸಾಕ್ಷಿ ಲೋಕ ಅದಾಲತ್ ನಲ್ಲಿ ಕ್ಲೋಜ್ ಮಾಡಲು ಲೇಟಾಗಿರಬಹುದು, ಡಿಸೆಂಬರ 2019 ರಲ್ಲಿ ಸಾಲ ಮಾಡಿರುತ್ತಾರೆ . ಹಿಂದಿನ ಸಾಲವನ್ನು ಕ್ಲೋಜ್ ಮಾಡಿ ಪುನಃ ಸಾಲ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಹಿಂದಿನ ಮ್ಯಾನೇಜರನ್ನು ಕೇಳಬೇಕು ಎಂದು

ನುಡಿದಿರುತ್ತಾರೆ . ಆ ಪ್ರಕರಣಕ್ಕೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳು ನಮ್ಮ ಬ್ಯಾಂಕಿನಲ್ಲಿ ಇವೆ ಎಂದರೆ ಸರಿ . ಸದರಿ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿ ಫೈಲ್ ಹೆಡ್ ಆಫೀಸ್ ಗೆ ಹೋಗಿದೆ ಎಂದು ನುಡಿದಿರುತ್ತಾರೆ . ಆ ಸಾಲದಲ್ಲಿರುವ ವ್ಯಕ್ತಿ ಮತ್ತು ಈ ಸಾಲದಲ್ಲಿರುವ ವ್ಯಕ್ತಿ ಒಬ್ಬನೇ ಆಗಿರುವುದರಿಂದ ಪ್ರಕರಣ ಮುಕ್ತಾಯಗೊಳ್ಳದೇ ಫೈಲ್ ನ್ನು ಪ್ರಧಾನ ಕಚೇರಿಗೆ ಕಳುಹಿಸಲು ಬರುವುದಿಲ್ಲ ಎಂದರೆ ಸಾಕ್ಷಿ ಇಲ್ಲಿ ಜಾಗ ಇರುವುದಿಲ್ಲ , ಕಾರಣ ಪ್ರಧಾನ ಕಚೇರಿಗೆ ಕಳುಹಿಸುತ್ತೇವೆ ಎಂದು ನುಡಿದಿರುತ್ತಾರೆ . ಆ ಸಾಲದಲ್ಲಿ ಸತೀಶ ದಾಮೋದರ ನಾಯ್ಕ ರವರನ್ನು ಬಿಟ್ಟು ಕಿರಣ , ಈ ಪ್ರಕರಣ ಆರೋಪಿ ಇದ್ದರು. ಆ ಸಾಲವನ್ನು ಕ್ಲೋಜ್ ಮಾಡಿ ಈ ಸಾಲವನ್ನು ಓಪನ್ ಮಾಡಬೇಕಾದರೆ ಆರೋಪಿಯ ಸಹಿ ಹಾಗೂ ಮನವಿಯನ್ನು ಪಡೆದಿರುತ್ತೇವೆ . ಆ ಕಾಗದ ಪತ್ರಗಳು ಆ ಪ್ರಕರಣದಲ್ಲಿ ಇದೆಯಾ ಈ ಪ್ರಕರಣದಲ್ಲಿ ಇದೆಯಾ ದಾಖಲಾತಿ ನೋಡಿ ಹೇಳಬೇಕು . ಆ ಪ್ರಕರಣದ ಸಾಲವನ್ನು ಮುಕ್ತಾಯ ಮಾಡಿದ್ದಾರೆ , ಈ ಪ್ರಕರಣದ ಸಾಲವನ್ನು ಪಡೆದಿದ್ದಾರೆ ಎಂದು ಫಿರ್ಯಾದಿನಲ್ಲಿ ಬರೆದಿಲ್ಲ . ಆ ರೀತಿ ಬರೆಯಲು ತೊಂದರೆ ಇರಲಿಲ್ಲ . ಈ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳನ್ನು ಹಾಜರು ಪಡಿಸಿದ್ದೇವೆ. ಆ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿಗಳು ಸಿಸಿ 793/2018 ನಲ್ಲಿ ಇವೆ. ಆ ಪ್ರಕರಣವನ್ನು ಕ್ಲೋಜ್ ಮಾಡುವಾಗ ಮರು ಸಾಲ ಪಡೆದ ಬಗ್ಗೆ ನಮೂದು ಮಾಡಿದ ಬಗ್ಗೆ ಗೊತ್ತಿಲ್ಲ.

6. ನಾನು ಫಿರ್ಯಾದಿ ಬ್ಯಾಂಕಿನಲ್ಲಿ ಫೆಬ್ರುವರಿ 2020 ರಿಂದ ವ್ಯವಸ್ಥಾಪಕನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ . ಅದಕ್ಕೂ ಮೊದಲು ಒಂದು ತಿಂಗಳ ಮುಂಚೆ ನಾನು ಮ್ಯಾನೇಜರ್ ಆಗಿ ಸೇರಿದ್ದೆ , ಆದರೆ ನನಗೆ ಅಧಿಕಾರ ನೀಡಿರಲಿಲ್ಲ. ನಾನು ಸೇರುವ ಪೂರ್ವ ಪ್ರಭಾರಿ ವ್ಯವಸ್ಥಾಪಕರು ರಾಘವೇಂದ್ರ ಪಟಗಾರ ರವರು ಇದ್ದರು. ರಾಘವೇಂದ್ರ ಪಟಗಾರರವರ ಸಾಕ್ಷಿ ವಿಚಾರಣೆ ಮಾಡಿಸಲು ತೊಂದರೆ ಇಲ್ಲ . ಸಾಯಿ ಬಾಬಾ ನವೋದಯ ಎಂಬುವ ಯಾವುದೇ ಸಂಘ ಇಲ್ಲ ಎಂದರೆ ಸರಿಯಲ್ಲ . ಸತೀಶ ಹಾಗೂ ಆರೋಪಿಯ ಹೆಸರನ್ನು ಬಿಟ್ಟು ಉಳಿದ ಸಂಘದ ಸದಸ್ಯರ ಹೆಸರು ನಾವು ಹಾಜರು ಪಡಿಸಿದ

ದಾಖಲಾತಿಗಳಲ್ಲಿ ಇಲ್ಲ ಎಂದರೆ ಸಾಕ್ಷಿ ಸತೀಶ ಹಾಗೂ ಗೋಪಾಲರವರು ಸಂಘದ ಪ್ರತಿನಿಧಿಯಾಗಿ ಜವಾಬ್ದಾರಿಯನ್ನು ತೆಗೆದುಕೊಂಡಿದ್ದರಿಂದ ಇತರ ಸದಸ್ಯರ ಹೆಸರು ಇಲ್ಲ .ಇತರ ಸದಸ್ಯರ ಹೆಸರುಗಳನ್ನು ಈ ಪ್ರಕರಣದಲ್ಲಿ ತೋರಿಸುವಂತಹ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ . ಅವರು ಸಾಲ ಪಡೆದುಕೊಂಡಿದ್ದರೋ ಇಲ್ಲವೋ ಮೊದಲಿನ ಸಾಲದ ಬಗ್ಗೆಸಾಲದ ಅರ್ಜಿಯಲ್ಲಿ ನಮೂದಿಸಬೇಕಾಗುತ್ತದೆ ಎಂದರೆ ಸಾಕ್ಷಿ ಶಿಫಾರಸ್ಸಿನಲ್ಲಿ ನಮೂದಿಸಿದೆ ಎಂದು ನುಡಿದಿರುತ್ತಾರೆ . ಆ ಶಿಫಾರಸ್ಸನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ . ಪ್ರತಿನಿಧಿ 1 ಮತ್ತು 2 ಜವಾಬ್ದಾರಿ ತೆಗೆದುಕೊಂಡಿದ್ದಾರೆ ಎಂದು ತೋರಿಸಲು ದಾಖಲಾತಿ ಪಡೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಠರಾವು ಪಡೆದುಕೊಂಡಿದ್ದೇವೆ ಎಂದು ನುಡಿದಿರುತ್ತಾರೆ . ಪ್ರತ್ಯೇಕವಾದ ಅಧಿಕಾರ ಪತ್ರ ಪಡೆದುಕೊಂಡಿಲ್ಲ. ಠರಾವಿನ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ . ಆ ಎಲ್ಲಾ ದಾಖಲಾತಿಗಳು ನಮ್ಮ ಕಚೇರಿಯಲ್ಲಿವೆ . ಆ ದಾಖಲಾತಿಗಳು ಪ್ರಕರಣಕ್ಕೆ ಸಂಬಂದಧಿಸಿಲ್ಲ ಕಾರಣ ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಈಗ ನ್ಯಾಯಾಲಯ 10 ನಿಮೀಷ ಅವಧಿ ಕೊಟ್ಟರೆ ಹೋಗಿ ತೆಗೆದುಕೊಂಡು ಬರುತ್ತೀರಾ ಎಂದರೆ ಸಾಕ್ಷಿ ಒಂದು ದಿನಾಂಕ ಕೊಟ್ಟರೆ ತೆಗೆದುಕೊಂಡು ಬಂದು ಹಾಜರು ಪಡಿಸುತ್ತೇನೆ ಎಂದು ನುಡಿದಿರುತ್ತಾರೆ . ಸಾಲದ ಖಾತೆ ನಂಬರವೈಜ್ , ಫೈಲ್ ಗಳನ್ನು ಇಟ್ಟಿರುತ್ತೇವೆ ಎಂದರೆ ಸರಿ . ನಮ್ಮ ಬ್ಯಾಂಕಿಗೆ ಫೋನ್ ಮಾಡಿ ಹೇಳಿದರೂ ಕೂಡ ಅಲ್ಲಿಯ ಸಿಬ್ಬಂದಿ ಅದನ್ನು ಹಾಜರು ಪಡಿಸಬಹುದು ಎಂದರೆ ಸರಿ . ನಮ್ಮ ಶಾಖೆಗೆ ನ್ಯಾಯಾಲಯದಿಂದ 5 ನಿಮೀಷದಲ್ಲಿ ಹೋಗಿ ಬರಹುದು . ಸದರಿ ದಾಖಲಾತಿಯನ್ನು ತರಲು ಮ್ಯಾನೇಜರ್ ರವರ ಅಪ್ರೂವಲ್ ತೆಗೆದುಕೊಳ್ಳಬೇಕಾಗುತ್ತದೆ . ನ್ಯಾಯಾಲಯಕ್ಕೆ ದಾಖಲಾತಿಯನ್ನು ಹಾಜರು ಪಡಿಸಬೇಕಾಗಿದೆ ಎಂದು ಕೇಳಿದರೆ ಅವರು ಒಪ್ಪಿಗೆಯನ್ನು ಕೊಡುತ್ತಾರೆ . ಈಗ ನ್ಯಾಯಾಲಯಕ್ಕೆ ಹಾಜರು ಪಡಿಸಿದ ಎಲ್ಲಾ ದಾಖಲಾತಿಗಳು ಪ್ರಕರಣ ದಾಖಲಿಸುವ ಪೂರ್ವದಲ್ಲಿ ನಮ್ಮ ಕಚೇರಿಯಲ್ಲಿತ್ತು ಎಂದರೆ ಸರಿ . ಅದರ ನಿರ್ವಹಣೆ ನಾನೇ ಮಾಡುತ್ತಿದ್ದೆ ಎಂದರೆ ಸರಿ . ನಿಪಿ-7 ರಿಂದ ನಿಪಿ-11 ನಮ್ಮ ಬ್ಯಾಂಕಿನಲ್ಲಿರುವ ನಿಗದಿತ ಪ್ರಿಂಟೆಡ್ ನಮೂನೆಗಳು ಎಂದರೆ ಸರಿ .

ಅದರಲ್ಲಿರುವ ಮಾಹಿತಿಯನ್ನು ನಮ್ಮ ಸಿಬ್ಬಂದಿಗಳೇ ತುಂಬಿದ್ದಾರೆ ಎಂದರೆ ಸಾಕ್ಷಿ ಅವರು ಹೇಳಿದ ಪ್ರಕಾರ ಭರ್ತಿ ಮಾಡಿದ್ದಾರೆ ಎಂದು ನುಡಿದಿರುತ್ತಾರೆ . ನಿಪಿ-6 ರಿಂದ ನಿಪಿ-11 ನಾವೇ ನಮ್ಮ ಸಿಬ್ಬಂದಿಗಳು ಮನಸೋ ಇಚ್ಚೆಯಂತೆ ತುಂಬಿಕೊಂಡಿದ್ದೇವೆ ಎಂದರೆ ಸರಿಯಲ್ಲ . ನಿಪಿ-6 ರಿಂದ ನಿಪಿ-11 ರಲ್ಲಿ ಮತ್ತು ನಿಪಿ-2 ರಲ್ಲಿ ನಿಪಿ -6 ರಲ್ಲಿರುವ ಸಹಿ ಆರೋಪಿಯ ಸಹಿ ಅಲ್ಲ ಎಂದರೆ ಸುಳ್ಳು . ಆರೋಪಿ ಎಷ್ಟು ವಿದ್ಯಾಭ್ಯಾಸ ಮಾಡಿದ್ದಾರೆ ಮಾಹಿತಿ ಇಲ್ಲ. ಆರೋಪಿಗೆ ಇಂಗ್ಲೀಷ ಓದಲು ಬರೆಯಲು ಬರುವುದಿಲ್ಲ ಎಂದರೆ ಮಾಹಿತಿ ಇಲ್ಲ. ನಿಪಿ-2 ರಲ್ಲಿ ಬರೆದಿರುವ ಎಲ್ಲಾ ಬರವಣಿಗೆ ಆಂಗ್ಲ ಭಾಷೆಯಲ್ಲಿದೆ ಎಂದರೆ ಸರಿ . ಚೆಕ್ ನಲ್ಲಿರುವ ಬರವಣಿಗೆ ಹಾಗೂ ಸಹಿಗೆ ವ್ಯತ್ಯಾಸ ಇದೆ ಎಂದರೆ ಸರಿ . ಚೆಕ್ ನಲ್ಲಿರುವ ಸಹಿಗೂ ಮತ್ತು ಬರವಣಿಗೆ ಇಂಕಿನಲ್ಲಿ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ದಿನಾಂಕ ನಮೂದಿಸಿದ ಇಂಕಿನಲ್ಲೂ ಕೂಡ ವ್ಯತ್ಯಾಸ ಇದೆ ಎಂದರೆ ಸರಿಯಲ್ಲ. ಬರೀಗಣ್ಣಿನಲ್ಲಿ ವ್ಯತ್ಯಾಸ ಕಂಡರೂ ವ್ಯತ್ಯಾಸ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚೆಕ್ ನಲ್ಲಿ ಇಷ್ಟು ಮೊತ್ತವನ್ನು ಬರೆಯಬೇಕು ಎಂದು ಅವರು ಬ್ಯಾಂಕಿಗೆ ಬಂದು ಕೇಳಿಕೊಂಡು ಬರೆದಿರುತ್ತಾರೆ . ಚೆಕ್ ನ್ನು ಕೊಟ್ಟ ಸಂದರ್ಭದಲ್ಲಿ ನಾನು ಇರಲಿಲ್ಲ , ಕಾರಣ ಅದರಲ್ಲಿರುವ ಬರವಣಿಗೆ ಯಾರು ಬರೆದಿದ್ದಾರೆ ಗೊತ್ತಿಲ್ಲ . ಚೆಕ್ ನಲ್ಲಿರುವ ಬರವಣಿಗೆ ಆರೋಪಿಯದ್ದಲ್ಲ ಎಂದರೆ ಗೊತ್ತಿಲ್ಲ. ಸದರಿ ಬರವಣಿಗೆಯನ್ನು ತಜ್ಞರ ಪರೀಕ್ಷೆಗೆ ಕಳುಹಿಸಿದರೆ ನಮ್ಮ ಯಾವುದೇ ತಕರಾರು ಇಲ್ಲ . ಅಕೌಂಟ್ ನಂಬರ ಆರೋಪಿಗೆ ಸೇರಿದ್ದು ಎಂದು ಮಾಹಿತಿ ಇದೆ . ಅದನ್ನು ಕೆನರಾ ಬ್ಯಾಂಕಿನಿಂದ ದೃಢೀಕೃತವಾಗಿ ತೆಗೆದುಕೊಳ್ಳಲಿಲ್ಲ. ಮೇಮೊದಲ್ಲಿ ಎಲ್ಲೂ ಸಹಿತ ಚೆಕ್ ನಲ್ಲಿರುವ ಖಾತೆ ಆರೋಪಿಯದ್ದು ಎಂದು ಇಲ್ಲ ಎಂದರೆ ಸಾಕ್ಷಿ ಬ್ಯಾಂಕಿನವರಿಗೆ ಕೇಳಬೇಕು ಎಂದು ನುಡಿದಿರುತ್ತಾರೆ . ನಿಪಿ-4 ರಂತೆ ಆರೋಪಿಗೆ ಯಾವುದೇ ನೋಟಿಸು ಜಾರಿಯಾಗಿಲ್ಲ ಎಂದರೆ ಸುಳ್ಳು . ನಿಪಿ-6 ರಲ್ಲಿರುವ ಸಹಿ ಆರೋಪಿಯದ್ದಲ್ಲ ಎಂದರೆ ಸರಿಯಲ್ಲ . ಈ ಸುಳ್ಳು ಪ್ರಕರಣ ದಾಖಲಿಸುವ ಸಲುವಾಗಿ ಕೃತಕವಾಗಿ ದಾಖಲಾತಿಗಳನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

7. ಸಾಲವನ್ನು ತೆಗೆದುಕೊಂಡ ನಂತರ ಹಣವನ್ನು ಸಂಘದ ಉಳಿತಾಯ ಖಾತೆಗೆ ಹಣವನ್ನು ಹಾಕಿರುತ್ತೇವೆ . ನಂತರ ಹಣ ಅವರವರ ಖಾತೆಗೆ ಹೋಗಿರುತ್ತದೆ . ಸಂಘದ ಉಳಿತಾಯ ಖಾತೆಯಲ್ಲಿ ಉಳಿದ ಸದಸ್ಯರ ಹೆಸರು ಇಲ್ಲ ಎಂದರೆ ಸಾಕ್ಷಿ ಪ್ರತಿನಿಧಿ 1 ಮತ್ತು 2 ರವರ ಹೆಸರು ಇರುತ್ತದೆ ಎಂದು ನುಡಿದಿರುತ್ತಾರೆ . ಒಂದು ಖಾತೆ ತೆಗೆಯಬೇಕಾದರೆ ಎಷ್ಟು ಸದಸ್ಯರು ಇರುತ್ತಾರೆ ಹೇಳಬೇಕಾಗುತ್ತದೆ ಎಂದರೆ ಸಾಕ್ಷಿ ಅವರು ಕೊಟ್ಟಿರುವ ಅಪ್ಲಿಕೇಶನ್ ನಲ್ಲಿ ಇರುತ್ತದೆ ಎಂದು ನುಡಿದಿರುತ್ತಾರೆ . ಸಂಘ ಎಂದರೆ ಅಧ್ಯಕ್ಷರು , ಉಪಾಧ್ಯಕ್ಷರು , ಖಜಾಂಚಿ ಎಂದು ಪದನಾಮಗಳು ಬದಲಾಗುತ್ತಾ ಇರುತ್ತದೆ ಎಂದರೆ ಸಾಕ್ಷಿ ಸಂಘದಲ್ಲಿ ಅವರವರು ಮಾಡಿಕೊಳ್ಳುತ್ತಾರೆ ಎಂದು ನುಡಿದಿರುತ್ತಾರೆ . ಸಂಘದವರು ಸಾಲವನ್ನು ಪಡೆಯಲು ಬಂದಾಗ ಅವರ ಗುರುತಿನ ಚೀಟಿ , ವಿಳಾಸದ ದಾಖಲಾತಿ ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ . ಸಂಘವನ್ನು ಯಾವ ಉದ್ದೇಶಕ್ಕಾಗಿ ಕಟ್ಟಿದ್ದಾರೆ ಮತ್ತು ಅದನ್ನು ನೋಂದಾಯಿಸಿದ್ದಾರಾ ಎಂಬ ಬಗ್ಗೆ ದಾಖಲಾತಿ ಪಡೆಯಬೇಕಾಗುತ್ತದೆ ಎಂದರೆ ಸಾಕ್ಷಿ ಸಂಘದ ಉದ್ದೇಶ ತಿಳಿದುಕೊಳ್ಳುತ್ತೇವೆ ಆದರೆ ನೋಂದಾವಣಿ ಆಗಬೇಕು ಎಂದು ಇಲ್ಲ ಎಂದು ನುಡಿದಿರುತ್ತಾರೆ . ಸಂಘದ ಎಲ್ಲಾ ಸದಸ್ಯರ ಹೆಸರನ್ನು ಸಾಲದ ಖಾತೆ ಹಾಗೂ ಪ್ರಕರಣಕ್ಕೆ ತೋರಿಸಬೇಕಾಗುತ್ತದೆ ಎಂದರೆ ಸರಿಯಲ್ಲ . ಸಂಘದ ಎಲ್ಲಾ ಸದಸ್ಯರ ಸ್ಪೆಷಿಮೆನ್ ಸಿಗ್ನೇಚರ್ ನ್ನು ಪಡೆದುಕೊಳ್ಳಬೇಕಾಗುತ್ತದೆ ಎಂದರೆ ಸರಿ . ಪ್ರಕರಣಕ್ಕೆ ಅವಶ್ಯಕತೆ ಇಲ್ಲದ ಕಾರಣ ಆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. 2,75,000/- ರೂ ಜಮಾ ಆಯಿತು ಎಂದು ಹೇಳುವ ಖಾತೆಯನ್ನು ನಾವೇ ನಿರ್ವಹಣೆ ಮಾಡುತ್ತೇವೆ ಎಂದರೆ ಸರಿ . ಅದನ್ನು ಸಹಿತ ಈ ಪ್ರಕರಣಕ್ಕೆ ಪೂರಕವಾಗುವಂತೆ ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಯಿ ಬಾಬಾ ನವೋದಯ ಸಂಘ ಇಲ್ಲದೇ ಇರುವುದರಿಂದ ಹಾಗೂ ಆರೋಪಿ ಸದರ ಸಂಘದ ಸದಸ್ಯನು ಆಗಿಲ್ಲದೇ ಇರುವುದರಿಂದ ಈ ಪ್ರಕರಣದ ಸಾಲವನ್ನು ತುಂಬಲು ಜವಾಬ್ದಾರನಾಗಿರುವುದಿಲ್ಲ ಎಂದರೆ ಸುಳ್ಳು . ಆರೋಪಿ ಸಂಘದ ಸದಸ್ಯ ಎಂದು ಹೇಳುವ ಬಗ್ಗೆ ಯಾವುದೇ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ಕೊಟ್ಟಿರುವ ಸಾಲದ ಅರ್ಜಿ ಮತ್ತು ಉಳಿದ ದಾಖಲಾತಿಗಳು ನಮ್ಮಲ್ಲಿ ಇಲ್ಲ

ಆ ಕಾರಣ ನಾವು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಕರಾರು ಪತ್ರವನ್ನು ಹಾಜರು ಪಡಿಸಿದ್ದೇವೆ ಎಂದು ನುಡಿದಿರುತ್ತಾರೆ . ಕಾನೂನುಬದ್ಧವಾಗಿ ಚೆಕ್ ನಲ್ಲಿ ನಮೂದಿಸಿದ ಹಣವನ್ನು ಆರೋಪಿ ಭರಿಸುವಂತದ್ದು ಇಲ್ಲ ಎಂದರೆ ಸರಿಯಲ್ಲ. ಆರೋಪಿ ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಯಾವುದೇ ಸಾಲವನ್ನು ಪಡೆದಿಲ್ಲ ಎಂದರೆ ಸುಳ್ಳು. ಈ ಪ್ರಕರಣದಲ್ಲಿ ನಾನು ಪ್ರಕರಣ ದಾಖಲಿಸು ಯಾವುದೇ ಅಧಿಕಾರವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ . ನಾನು 2020 ರಂದು ಫಿರ್ಯಾದಿ ಬ್ಯಾಂಕಿಗೆ ಸೇರಿದ್ದು ಆಗಿರುವುದರಿಂದ ಈ ಪ್ರಕರಣದಲ್ಲಿ ಹಾಜರು ಪಡಿಸಿದ ಅಧಿಕಾರ ಪತ್ರ ದಿಃ 11-04-2015 ಎಂದು ತೋರಿಸುತ್ತದೆ ಎಂದರೆ ಸರಿ . ಸಾಕ್ಷಿ ಹೆಡ್ ಆಫೀಸ್ ನಿಂದ ಠರಾವು ಮಾಡಿ ಯಾರು ಶಾಖಾ ವ್ಯವಸ್ಥಾಪಕರಾಗಿರುತ್ತಾರೆ ಅವರಿಗೆ ಆ ಅಧಿಕಾರ ಪತ್ರವನ್ನು ಕೊಟ್ಟಿರುತ್ತೇವೆ ಎಂದು ಶಾಖಾ ವ್ಯವಸ್ಥಾಪಕರಿಗೆ ನೀಡಿರುತ್ತಾರೆ . 2015 ರಲ್ಲಿ ನಾನು ಫಿರ್ಯಾದು ಸಂಘಕ್ಕೆ ಸೇರಿಲ್ಲ ಎಂದರೆ ಸರಿ . ನನಗೆ ನವೆಂಬರ 2019 ರಲ್ಲಿ ಫಿರ್ಯಾದು ಸಂಸ್ಥೆಗೆ ನನ್ನನ್ನು ನೇಮಕಾತಿ ಮಾಡಿಕೊಂಡಿರುತ್ತಾರೆ . ಅದಕ್ಕೂ ಪೂರ್ವದಲ್ಲಿ ನಾನು ಮೂರು ತಿಂಗಳು ಖಾಲಿ ಇದ್ದೆ . ಅದಕ್ಕಿಂತ ಮೊದಲು ಸೆಂಟ ಮಿಲಾಗ್ರಿಸ್ ಸಂಸ್ಥೆಯಲ್ಲಿ ಸಿಬ್ಬಂದಿ ಹಾಗೂ ಅಸಿಸ್ಟೆಂಟ್ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದೆ . ಸೆಂಟ್ ಮಿಲಾಗ್ರಿಸ್ ಸಂಸ್ಥೆಯಲ್ಲಿ 2016 ರಿಂದ 2019 ರ ಒಳಗೆ ಕಾರ್ಯ ನಿರ್ವಹಿಸಿರುತ್ತೇನೆ . ಈ ಪ್ರಕರಣದಲ್ಲಿ ಎಲ್ಲಾ ಕೃತಕ ದಾಖಲಾತಿಗಳನ್ನು ಹಾಜರು ಪಡಿಸಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ . ನಮ್ಮ ಬಳಿ ಯಾವುದೇ ದಾಖಲಾತಿ ಇಲ್ಲ , ಆದರೂ ಹಾಜರು ಪಡಿಸುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಪಿಡಬ್ಲೂಃ 1

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.